**ಅಸಲು ದಾವಾ ನಂಃ 90/2022**
**ಪಿ.ಡಬ್ಲ್ಯೂಃ 1,**

**ದಿನಾಂಕ :03-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**

**ಪಾಟಿ ಸವಾಲು :- ಶ್ರೀ. ಡಿ.ಡಿ. ಪ್ರತಿವಾದಿ ಪರ ವಕೀಲರಿಂದ :**

ಸ.ನ. 15 ಒಟ್ಟು ಕ್ಷೇತ್ರ 10 ಎಕರೆ. ಅದರಲ್ಲಿ 5 ಎಕರೆ ನಾನು ಉಳುಮೆ ಮಾಡುತ್ತಿದ್ದೇನೆ ಎಂದರೆ ಸರಿ. ಉಳಿದ 5 ಎಕರೆ ಯಲ್ಲಿ 1ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಸ.ನ. 15/1 ರಲ್ಲಿ 4 ಎ ಸ್ವಾಧೀನದಲ್ಲಿದ್ದೇನೆ ಎಂದರೆ ಸರಿ. ಸ.ನ. 15/3 ರಲ್ಲಿ 1 ಎಕರೆ ಸ್ವಾಧೀನದಲ್ಲಿದ್ದೇನೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರ ಪ್ಯಾರಾ ನಂ-3 ರಲ್ಲಿ 1954 ರಲ್ಲಿ ಪಾಲು ಆಗುವ ಸಮಯದಲ್ಲಿ ಯಶವಂತರಾವ ಇವರಿಗೆ ಎಷ್ಟು ಜಮೀನು ನೀಡಿದ್ದೀರಿ ಪ್ರಶ್ನಗೆ ಸಾಕ್ಷಿ ಸ.ನ.40 ರಲ್ಲಿ 14 ಎ. 12 ಗು. ನೀಡಲಾಗಿದೆ. ಹಣಮಂತರಾವ ಇವರಿಗೆ 100 ಎಕರೆ ಇದ್ದು ಎಲ್ಲರಿಗೂ 20 ಎಕರೆ ನೀಡಲಾಗಿದೆ. ಯಶವಂತರಾವ ಇವರಿಗೆ 14 ಎಕರೆ ನೀಡಲಾಗಿದೆ. ಅಣ್ಣೆಮ್ಮ ಇವರು ತೀರಿ ಹೋದ ನಂತರ ಪಾರ್ವತಿಗೆ ನಮ್ಮ ಅಜ್ಜ ಹಣಮಂತರಾವ ಮದುವೆ ಮಾಡಿಕೊಂಡ. 1954 ರಲ್ಲಿ ಪಾಲು ಆಗುವ ಸಮಯದಲ್ಲಿ ಆತನಿಗೆ ಯಾವುದೇ ಪಾಲು ಕೊಟ್ಟಿಲ್ಲಾ. ನಂತರ ನಮ್ಮ ತಂದೆ ರಕ್ತ ಸಂಬಂಧ ಇದ್ದ ಕಾರಣ ಯಶವಂತರಾವ ಇವರಿಗೆ 14 ಎಕರೆ 12 ಗು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1954 ರಲ್ಲಿ ಯಶವಂತರಾವ ಇವರಿಗೆ ಪಾಲು ನೀಡಿಲ್ಲಾ ಆದ ಕಾರಣ ಪೂರ್ಣ ಪ್ರಮಾಣ ಪಾಲು ಆಗಿಲ್ಲಾ ಎಂದರೆ ಸಾಕ್ಷಿ ಯಶವಂತರಾವ ಇವರಿಗೆ ಪಾಲು ಕೊಟ್ಟಿಲ್ಲಾ ಎಂದು ನುಡಿಯುತ್ತಾರೆ.

**( ಈ ಹಂತದಲ್ಲಿ ಹೆಚ್ಚಿನ ಪಾಟಿ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು, ಪಾಟಿ ಸವಾಲು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**